ಸಾಕ್ಷಿಯನ್ನು ದಿಃ**17.06.2025** ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.

**ಪಾಟೀ ಸವಾಲುಃ ವಾದಿ ಪರ ಶ್ರೀ ಬಿ.ಆರ್.ಎಲ್ ವಕೀಲರಿಂದಃ-**

ನಾನು ವ್ಯವಸಾಯ ಮಾಡಿಕೊಂಡಿದ್ದೇನೆ. ಸಾಕ್ಷಿ ಹೇಳಲು ನನ್ನನ್ನು ಈ ದಿನ ನ್ಯಾಯಾಲಯಕ್ಕೆ ಯಾರು ಕರೆದುಕೊಂಡು ಬಂದಿದ್ದು ಎಂದರೆ ನ್ಯಾಯಾಲಯದ ಸಮನ್ಸ್ ಬಂದ ಕಾರಣ ಬಂದಿದ್ದೇನೆ. ನಾನು ವಿಲ್ ಬಗ್ಗೆ ಸಾಕ್ಷಿ ಹೇಳಿದ್ದು, ಸದರಿ ವಿಲ್ ಅನ್ನು 2013 ರಲ್ಲಿ ಮಾಡಿದ್ದು ಇರುತ್ತದೆ. ಕೆಂಪೇಗೌಡರಿಗೆ ಸಂಬಂಧದಲ್ಲಿ ನಾನು ತಮ್ಮನ ಅಳಿಮಯ್ಯನಾಗಬೇಕು. ಕೆಂಪೇಗೌಡರಿಗೆ 3 ಜನ ಮಕ್ಕಳಿದ್ದರು. ವಿಲ್ ಮಾಡಬೇಕೆಂದು ಕೆಂಪೇಗೌಡರು 6 ತಿಂಗಳ ವೊದಲೆ ನನ್ನ ಬಳಿ ಹೇಳಿದ್ದರು. ನಮ್ಮ ಮನೆಯಲ್ಲೆ ಬಂದು ಹೇಳಿದ್ದರು, ಇನ್ನೋಮ್ಮೆ ಅವರ ಮನೆಗೆ ನನ್ನನ್ನು ಕರೆಸಿಕೊಂಡು ವಿಲ್ ಮಾಡಿಸುವ ಬಗ್ಗೆ ಹೇಳಿದ್ದರು. ನಮ್ಮ ಮನೆಗೆ ಅವರು ಕಾರಿನಲ್ಲಿ ಬಂದಿದ್ದರು. ಅವರ ಜೊತೆ ಡ್ರೈವರ್ ಇದ್ದರು.

ಕೆಂಪೇಗೌಡರಿಗೆ ಒಟ್ಟು ಎಷ್ಟು ಆಸ್ತಿ ಇದೆ ಎಂದು ನನಗೆ ಗೊತ್ತಿಲ್ಲ. ದೈತ್ಯನಕೆರೆ, ಅಸ್ವಾಳು, ಅನ್ನರಾಯಪುರ ಗ್ರಾಮದ ಸರ್ವೆ ನಂ. ಗಳಿಗೆ ಸಂಬಂಧಿಸಿದಂತೆ ಕೆಂಪೇಗೌಡರು ವಿಲ್ ಮಾಡುವುದಾಗಿ ನನ್ನ ಬಳಿ ಹೇಳಿದ್ದರು. ಸರ್ವೆ ನಂ. ಗಳನ್ನು ಹೇಳಲು ಬರುವುದಿಲ್ಲ. ಸದರಿ ವಿಲ್ ಅನ್ನು ಲಾಯರ್ ಮಂಜುನಾಥ ರವರು ಬರೆದಿದ್ದರು. ವಿಲ್ ಗೆ ಸಹಿ ಮಾಡುವಾಗ ಸದರಿ ಲಾಯರ್ ಅನ್ನು ನೋಡಿಲ್ಲ ಎಂದರೆ ಸರಿಯಲ್ಲ. ಹಾಗೆ ಸಹಿ ಮಾಡಿದಂತ ವಿಲ್ ಅನ್ನು ನಾನು ಓದಿ ನೋಡಿಲ್ಲ. ನಾನು ಸಾಮಾನ್ಯವಾಗಿ ಯಾರಾದರೂ ದಾಖಲೆಗೆ ಸಹಿ ಮಾಡಿ ಎಂದರೆ ಅದನ್ನು ಓದದೆ ಸಹಿ ಮಾಡುವ ಅಭ್ಯಾಸ ಇದೆಯಾ ಎಂದರೆ ಬೇರೆಯವರ ಕಡೆ ನೋಡಿ ಓದಿಸಿಕೊಂಡು ಸಹಿ ಮಾಡುತ್ತೇನೆ ಎನ್ನುತ್ತಾರೆ. ಆಗ ವಿಲ್ ಗೆ ಸಹಿ ಮಾಡುವ ಕಾಲಕ್ಕೆ ನಾನು ಪತ್ರವನ್ನು ಓದಿಸಿಲ್ಲ ಆದರೆ ಕೆಂಪೇಗೌಡರು ಓದಿಸಿ ನೋಡಿ ನಂತರ ನಾನು ಬಳಿ ಸಹಿ ಮಾಡಿರುತ್ತೇನೆ.

ವಿಲ್ ಮಾಡಿದೆ ಎಂಬ ದಿವಸ ನೇರವಾಗಿ ಊರಿನಿಂದ ನೊಂದಣಾಧಿಕಾರಿ ಕಛೇರಿಗೆ ಹೋಗಿದ್ದೇವು. ನೊಂದಣಾಧಿಕಾರಿ ಕಛೇರಿ ಬಿಟ್ಟು ನಾನು ಆ ದಿನ ಬೇರೆಲ್ಲೂ ಹೋಗಿಲ್ಲ. ಕೆಂಪೇಗೌಡರಿಗೆ 2008 ರಿಂದ ಆರೋಗ್ಯ ಸರಿ ಇರಲಿಲ್ಲ ಎಂದರೆ ಸಾಕ್ಷಿ ಅವರು ಮಾತನಾಡುತ್ತಿದ್ದರು, ತಿರುಗಾಡುತ್ತಿದ್ದರು ಎನ್ನುತ್ತಾರೆ. ವಿಲ್ ಪತ್ರವನ್ನು ಕೆಂಡಗಣ್ಣೇಗೌಡ, ಸಾಂತರಾಜು, ಮತ್ತು ಅವರ ಮಗ ವಿನಯ್ ಕುಮಾರ ರವರಿಗೆ ಬರೆಸಿದ್ದರು. ವಿಲ್ ಪತ್ರಕ್ಕೆ ನಾನಲ್ಲದೆ ರಾಮನಾಯಕ ಎಂಬುವವರು ಸಹಿ ಮಾಡಿದ್ದರು.

ಕೆಂಪೇಗೌಡರು ಯಾವಾಗ ಮರಣ ಹೊಂದಿರುತ್ತಾರೆ ಎಂದು ನನಗೆ ನೆನಪಿಲ್ಲ. ಅವರ ಸತ್ತಾಗ ನಾನು ಹೋಗಿಲ್ಲ ಎಂದರೆ ಸರಿಯಲ್ಲ. ವಿಲ್ ಮಾಡಿದಂತಹ ಸ್ವತ್ತುಗಳು ಪಿತ್ರಾರ್ಜಿತ ಅಥವಾ ಸ್ವಯಾರ್ಜಿತವೊ ಎಂದು ತಿಳಿಸಿದುಕೊಂಡಿದ್ದಿರಾ ಎಂದರೆ ಅಸ್ವಾಳು ಗ್ರಾಮದ್ದೂ ಪಿತ್ರಾರ್ಜಿತ ಆಸ್ತಿ ಮತ್ತು ಉಳಿದ ಸ್ವತ್ತುಗಳು ಸ್ವಯಾರ್ಜಿತ ಅಸ್ತಿ ಎನ್ನುತ್ತಾರೆ. ಕೆಂಪೇಗೌಡ ಹೇಳಿದ್ದನ್ನು ಮಾತ್ರ ಕೇಳಿಸಿಕೊಂಡಿದ್ದೆ ಆದರೆ ಆ ಬಗ್ಗೆ ದಾಖಲೆ ನೋಡಿಲ್ಲ. ನನ್ನ ಸಮಕ್ಷಮ ಯಾವುದೆ ಪತ್ರ ಬರೆಸಿಲ್ಲ ಅದಕ್ಕೆ ನಾನು ಸಹಿ ಮಾಡಿಲ್ಲ, 2 ಮತ್ತು 3 ನೇ ಪ್ರತಿವಾದಿಯವರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**1 ನೇ ಪ್ರತಿವಾದಿ ಪರ ವ್ಯತಿರಿಕ್ತತೆ ಇರುವ ಕಾರಣ ಅರ್ಜಿ ಸಲ್ಲಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುವ ಮೇರೆಗೆ ಅನುಮತಿಸಲಾಗಿದೆ.**

**ಪಾಟೀ ಸವಾಲುಃ 1 ನೇ ಪ್ರತಿವಾದಿ ಪರ ಶ್ರೀ ಎನ್.ಎಸ್.ಜಿ. ವಕೀಲರಿಂದಃ-**

ಕೆಂಪೇಗೌಡರ ತಂದೆ ಮೂಲತಃ ವ್ಯವಸಾಯಗಾರರು ಎಂದರೆ ಸರಿ. ಅವರಿಗೆ ಎಷ್ಟು ಜಮೀನು ಇತ್ತು ಎಂದು ನನಗೆ ಗೊತ್ತಿಲ್ಲ. ಕೆಂಪೇಗೌಡರು ಮೂಲತಃ ವ್ಯವಸಾಯಗಾರರು ಎಂದರೆ ಸರಿ. ಕೆಂಪೇಗೌಡರು ಮತ್ತು ಅವರ ಅಣ್ಣ-ತಮ್ಮಂದಿರು ಯಾವಾಗ ಭಾಗವಾದರು ಎಂದು ನನಗೆ ಗೊತ್ತಿಲ್ಲ.

ಆಸ್ತಿಗಳ ಬಗ್ಗೆ ದಾಖಲೆಗಳನ್ನು ನಾನು ನೋಡಿಲ್ಲ. 2013 ರ ಸಾಲಿನಲ್ಲಿ ಕೆಂಪೇಗೌಡರಿಗೆ ವಯಸ್ಸು ಅಂದಾಜು 75 ವರ್ಷ ಆಗಿತ್ತು. 2013 ರ ಕ್ಕೂ ಮೊದಲು ಅವರಿಗೆ ಸ್ಟ್ರೋಕ್ ಆಗಿ ಬೆಡ್ ರೀಡನ್ ಆಗಿದ್ದರು ಎಂದರೆ ಸಾಕ್ಷಿ ಸ್ಟ್ರೋಕ್ ಆಗಿತ್ತು ಆದರೆ ಓಡಾಡುತ್ತಿದ್ದರು ಮತ್ತು ಮಾತನಾಡುತ್ತಿದ್ದರು ಎನ್ನುತ್ತಾರೆ. ಅವರಿಗೆ 2008 ರಲ್ಲಿ ಸ್ಟ್ರೋಕ್ ಆಗಿ ಅಪೋಲೊ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡು ನಂತರ ಆರೋಗ್ಯವಾಗಿದ್ದರು. ಯಾವ ಯಾವ ಅಂಗಗಳಿಗೆ ಸ್ಟ್ರೋಕ್ ಆಗಿತ್ತು ಎಂದು ನನಗೆ ಹೇಳಲು ಆಗುವುದಿಲ್ಲ. ಮೂಲತಃ ಸಹಿ ಮಾಡಲು ಮರೆತ್ತಿದ್ದರು ಆದರೆ ಸ್ಟ್ರೋಕ್ ಆದ ನಂತರ ಕೈ ನಡುಕ ಆಗುತ್ತಿತ್ತು. ಅವರು ಯಾವಾಗಿನಿಂದ ಹೆಬ್ಬಟ್ಟು ಹಾಕುತ್ತಿದ್ದರು ಎಂದು ನನಗೆ ಗೊತ್ತಿಲ್ಲ.

ವಿಲ್ ಸಂಬಂಧ ನೊಂದಣಾಧಿಕಾರಿ ಕಛೇರಿಗೆ ನಾನು 2 ಬಾರಿ ಹೋಗಿದ್ದೆ. 2013 ಕ್ಕೂ ಮೊದಲೆ 1 ಬಾರಿ ಕಛೇರಿಗೆ ಹೋಗಿದ್ದೆ. 2013 ಕ್ಕೂ ಮೊದಲು ಪತ್ರವನ್ನು ಯಾರು ಬರೆದಿದ್ದರು ಎಂದು ನನಗೆ ಗೊತ್ತಿಲ್ಲ. ಆ ಸಮಯದಲ್ಲಿ ಕಾರ್ ಡ್ರೈವರ್ ಕೆಂಪೇಗೌಡರನ್ನು ಕಾರಿನಲ್ಲಿ ಕರೆದುಕೊಂಡು ಬಂದಿದ್ದರು. 2013 ಕ್ಕೂ ಮೊದಲು ಅದ ವಿಲ್ ನ ಬಗ್ಗೆ 2013 ರ ವಿಲ್ ನಲ್ಲಿ ಬರೆಸಿದ್ದಾರೆ ಎಂದು ನನಗೆ ಗೊತ್ತಿಲ್ಲ. ಮೊದಲ ವಿಲ್ ನಲ್ಲಿ ಏನು ಒಕ್ಕಣಿಕೆ ಇತ್ತು ಎಂದು ನನಗೆ ಗೊತ್ತಿಲ್ಲ. ನಾನು ವಿಲ್ ಆಗುವ ದಿನ ಬೆಳಿಗ್ಗೆ 10.30 ಮನೆಯಿಂದ ಬಂದಿದ್ದು, ನೊಂದಣಾಧಿಕಾರಿ ಕಛೇರಿಗೆಯಲ್ಲಿ ಸಹಿ ಮಾಡಿ ಮುಗಿಸುವ ಕಾಲಕ್ಕೆ 1.00 ಗಂಟೆ ಆಗಿತ್ತು. ವಿಲ್ ಬರೆಯುವ ಕಾಲಕ್ಕೆ ಏನೇಲ್ಲಾ ದಾಖಲೆ ತಂದಿದ್ದರು ಎಂದು ನನಗೆ ಗೊತ್ತಿಲ್ಲ. ನಾನು ಬರುವ ಮೊದಲೆ ವಿಲ್ ನ ಒಕ್ಕಣಿಕೆ ಬರೆದು, ನಾನು ನೇರವಾಗಿ ನೊಂದಣಾಧಿಕಾರಿ ಕಛೇರಿಗೆ ಹೋಗಿದ್ದೆ. ನನ್ನ ತಂದೆ ಹೆಸರು ಕರೀಗೌಡ ಊರುಫ್ ಕೆಂಪಚೌಗೇಗೌಡ ಎಂದು ಬರೆಸಿದ್ದೆ.

ನಿಡಿ. 84 ರ ವಿಲ್ ಮಾಡಿಸುವ ಬಗ್ಗೆ ಇಂತಹ ದಿನ ಬರಬೇಕೆಂದು ಕೆಂಪೇಗೌಡರು ನನಗೆ ಒಂದು ವಾರ ಮೊದಲೆ ಹೇಳಿದ್ದರು. ಆ ಸಮಯದಲ್ಲಿ ಕೆಂಪೇಗೌಡರು ಮಾತನಾಡುವ ಸ್ಥಿತಿಯಲ್ಲಿ

ಇರಲಿಲ್ಲ ಅನಾರೋಗ್ಯದ ಸ್ಥಿತಿಯಲ್ಲಿ ಇದ್ದರು ಎಂದರೆ ಸಾಕ್ಷಿ ಮಾತನಾಡುವುದೇನು ಅಷ್ಟೇನೂ ನಿಂತು ಹೋಗಿರಲಿಲ್ಲ, ಮಾತನಾಡುತ್ತಿದ್ದರು, ಆರೋಗ್ಯವಾಗಿದ್ದರು. ಕೆಂಪೇಗೌಡರು ಯಾವಾಗ ತೀರಿಕೊಂಡಿದ್ದಾರೆ ಎಂದು ನನಗೆ ನೆನಪಿಲ್ಲ. ವಿಲ್ ಅನ್ನು ಅವರ ಮಗ ಮತ್ತು ಮೊಮ್ಮಗ ಸೃಷ್ಟಿ ಮಾಡಿರುವುದು ಎಂದರೆ ಸರಿಯಲ್ಲ. ಅವರು ಯಾವುದೆ ವಿಲ್ ಅನ್ನು ಬರವಣಿಗೆ ಮಾಡಿಸಿಲ್ಲ ಎಂದರೆ ಸರಿಯಲ್ಲ. ಅವರ ಜೊತೆ ನಾವೂ ಕೂಡ ಸಾಕ್ಷಿದಾರರಾಗಿ ಷಾಮೀಲಾಗಿ ವಿಲ್ ಅನ್ನು ಸೃಷಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ.

**3 ನೇ ಪ್ರತಿವಾದಿ ಪರ ವಕೀಲರು ಗೈರು ಹಾಜರಿದ್ದು, ಅವರ ಪರ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಭಾಗ್ಯಮ್ಮ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ., ಹುಣಸೂರು.